**CC 683/2019**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 683/2019**

**ಸಿ ಡಬ್ಲ್ಯೂ -4**
**ಪಿ ಡಬ್ಲ್ಯೂ -2**

**ಸಾಕ್ಷಿಯ ಹೆಸರು -** **ಪಿ ಸೋಮಪ್ಪ**
**ತಂದೆಯ ಹೆಸರು -** **ಮರಿಯಪ್ಪ**
**ವಯಸ್ಸು -** 52 **ವರ್ಷಗಳು**
**ಉದ್ಯೋಗ -** **ಚಾಲಕ**
**ವಾಸಸ್ಥಳ -** **ಗುಂಡಾ, ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 28-11-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ **3** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ **3**(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಸುಮಾರು **4-5** ವರ್ಷಗಳ ಹಿಂದೆ ಪೋಲಿಸ್ ಠಾಣೆಯಲ್ಲಿ ಮಾಡಿದ್ದೆ. ನಿಪಿಃ **3** ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ</u>**

ದಿಃ 04-09-2017 ರಂದು ಪರಕರಣದ ತನಿಖಾಧಿಕಾರಿಯ ನನ್ನನ್ನು ಮತ್ತು ಚಾಸಾ -5 ರವರನ್ನು ಠಾಣೆಗೆ ಬರಮಾಡಿಕೊಂಡು ಚಾಸಾ -1 ರವರನ್ನು ಪರಿಚಯಿಸಿ ಅವರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಲು ಸಹಕರಿಸುವಂತೆ ಕೇಳಿಕೊಂಡಿದ್ದರು ಅಂದರೆ ಸರಿಯಲ್ಲ. ಚಾಸಾ -1 ರವರು ನಮ್ಮನ್ನು ಹೊಸಪೇಟೆಯ ಹಳೇ ಉಪ ನೋಂದಣಾಧಿಕಾರಿಗಳ ಕಚೇರಿ ಮತ್ತು ಹಾಲಿ ಪೋಲಿಸ್ ಉಪ ಅಧಿದಕ್ಷಕರು, ಕರ್ನಾಟಕ ಲೋಕಾಯುಕ್ತ ಕಚೇರಿಗೆ ಕರೆದುಕೊಂಡು ಹೋಗಿ ಕೃತ್ಯ ನಡೆದ ಸ್ಥಳ ಎಂದು ತೋರಿಸಿದ್ದರು ಅಂದರೆ ಸರಿಯಲ್ಲ. ಆಗಲೇ ನಿಪಿಃ 3 ರ ಪಂಚನಾಮೆ ಬರೆಯಲಗಿತ್ತು ಅಂದರೆ ಸರಿಯಲ್ಲ. ನಿಪಿಃ 3 ಕ್ಕೆ ಸ್ಥಳದಲ್ಲೆ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಆಗಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಎಂ. ಬಿ.ಪಿ.ಎನ್ ವಕೀಲರಿಂದಃ</u>** <u>ಇಲ್ಲಾ.</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.